# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 38/2022**

**ದೋ.ಸಾ. :6 ಫ್ರಾ.ಸಾ. :4**

| | | |
|---|---|---|
| ಸಾಕ್ಷಿಯ ಹೆಸರು | : | ಸೈನಾಜ್ ಅಸ್ವಾಕ್ ಶೇಖ್ |
| ಗಂಡನ ಹೆಸರು | : | ಅಸ್ವಾಕ್ ಶೇಖ್ |
| ವಯಸ್ಸು | : | 40 ವರ್ಷ |
| ಕೆಲಸ | : | ಮನೆ ಕೆಲಸ |
| ವಾಸ | : | ಅಂಕೋಲ |

**ದಿನಾಂಕಃ 25-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:-**

1. ಚಾ.ಸಾ.1 ಮತ್ತು 5 ನನ್ನ ತಮ್ಮಂದಿರು, ಚಾ.ಸಾ.4 ಮತ್ತು 7 ನನ್ನ ಸಂಬಂಧಿಕರು, ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯವಿದೆ. 1 ಮತ್ತು 2 ನೇ ಆರೋಪಿತರು ಸೇರಿ ಚಾ.ಸಾ.4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ದೂಡಾಡಿಲ್ಲ ಹಾಗೂ ನನಗೂ ಸಹ ಹೊಡೆದದ್ದು, ಬಡಿದಿದ್ದು ಇರುವುದಿಲ್ಲ ಹಾಗೂ ನನ್ನ ಮಾನಕ್ಕೆ ಕುಂದುಂಟಾಗುವಂತೆ ವರ್ತಿಸಿರುವುದಿಲ್ಲ. 3 ನೇ ಆರೋಪಿತನು ನನ್ನ ತಮ್ಮ ಚಾ.ಸಾ. 5 ರವರಿಗೆ ಹೊಡೆದಿಲ್ಲ. 3 ಮತ್ತು 4 ನೇ ಆರೋಪಿತರು ಸೇರಿ ನಮಗೆಲ್ಲಾ ಹೊಡೆದದ್ದು ಇರುವುದಿಲ್ಲ ಹಾಗೂ ಜೀವ ಬೆದರಿಕೆ ಹಾಕಿದ್ದು ಇರುವುದಿಲ್ಲ. ನಾನು ಕೆಲಸ ಮಾಡುವಾಗ ಬಿದ್ದು ನೋವು ಮಾಡಿಕೊಂಡಿದ್ದು, ಈ ಬಗ್ಗೆ ಮುಂಡಗೋಡದ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ, ನಾನು ಆಸ್ಪತ್ರೆಗೆ ಹೋದಾಗ ನನ್ನ ಜೊತೆ ಚಾ.ಸಾ.1,4,5 ರವರು ಬಂದಿದ್ದರು. ಈ ಘಟನೆ ಕುರಿತು ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ, ಹಾಗೂ ನನ್ನ ತಪ್ಪು ಕಲ್ಪನೆಯಿಂದ ಶಿರಸಿ ನ್ಯಾಯಾಲಯದಲ್ಲಿ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಹೇಳಿಕೆಯನ್ನು ನಿ.ಪಿ.5 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.5(ಎ) 5(ಬಿ) ಎಂದು ಗುರುತಿಸಲಾಯಿತು. ನನಗೆ ಕನ್ನಡ ಓದಲು-ಬರೆಯಲು ಬರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ, ಅನುಮತಿ ನೀಡಲಾಯಿತು).

2. ದಿನಾಂಕ 14.04.2019 ರಂದು ನಾನು ಹಾಗೂ ಚಾ.ಸಾ.4 ಸೇರಿ ಗುಂಜಾವತಿ ಗ್ರಾಮಕ್ಕೆ ಶಬಾನ ಇವಳ ಮದುಗೆ ಹೋಗಿದ್ದೆವು ಹಾಗೂ ಅಲ್ಲಿಗೆ ಚಾ.ಸಾ.1 ಮತ್ತು 5 ರವರು ಸಹ ಬಂದಿದ್ದರು ಎಂದರೆ ಸರಿಯಲ್ಲ. ನಂತರ ಅಲ್ಲಿಗೆ ಊಟಕ್ಕೆ ಬಂದ 1 ನೇ ಆರೋಪಿತನು ನನ್ನ ತಮ್ಮ ಚಾ.ಸಾ.5 ರವರನ್ನು ಉದ್ದೇಶಿಸಿ, ತಾನು ಊಟ ಮಾಡಿದ ತಟ್ಟೆಯಲ್ಲಿ ಬೇರೆಯವರಿಗೆ ಊಟ ಕೊಡು ಎಂದು ಹೇಳಿದಾಗ, ಆ ಸಮಯದಲ್ಲಿ ಮಾತಿಗೆ ಮಾತಾಗಿದ್ದು, 1 ನೇ ಆರೋಪಿತನು ತಟ್ಟೆಯಿಂದ ಚಾ.ಸಾ.5 ರವರಿಗೆ ಹೊಡೆಯಲು ಬಂದಿರುತ್ತಾನೆ ಎಂದರೆ ಸರಿಯಲ್ಲ.

3. ನಂತರ ದಿನಾಂಕ 15.04.2019 ರಂದು ರಾತ್ರಿ ನಾವು ನಮ್ಮ ಅತ್ತೆ ಫಾತಿಮಾ ಇವರ ಮನೆಯಲ್ಲಿದ್ದಾಗ 1 ನೇ ಆರೋಪಿತನು ಅಲ್ಲಿಗೆ ಬಂದು ಚಾ.ಸಾ.7 ರವರ ಹತ್ತಿರ ಚಾ.ಸಾ. 4 ರವರಿಗೆ ಹೊಡೆಯುವುದಾಗಿ ಹೇಳಿರುತ್ತಾನೆ ಎಂದರೆ ಸರಿಯಲ್ಲ. ಆಗ ಚಾ.ಸಾ. 7 ರವರು ಜಗಳ ಮಾಡಬೇಡಿ ಎಂದು ಹೇಳಿದಾಗ 1 ಮತ್ತು 2 ನೇ ಆರೋಪಿತರು ಸೇರಿ ಚಾ.ಸಾ.4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ದೂಡಾಡಿದರು ಎಂದರೆ ಸರಿಯಲ್ಲ. ನಂತರ ನಾನು ಅಲ್ಲಿಗೆ ಹೋದಾಗ 1 ಮತ್ತು 2 ನೇ ಆರೋಪಿತರು ಸೇರಿ ನನಗೆ ಕೈಯಿಂದ ತಲೆಗೆ ಹೊಡೆದು, ನನ್ನ ಬಟ್ಟೆಯನ್ನು ಹರಿದು ಮಾನಕ್ಕೆ ಕುಂದುಂಟಾಗುವಂತೆ ವರ್ತಿಸಿ ದೂಡಿ ಹಾಕಿದರು ಎಂದರೆ ಸರಿಯಲ್ಲ. ಆಗ ನಾನು ಕೆಳಗೆ ಬಿದ್ದಿದ್ದು, ನನ್ನ ತಲೆಗೆ ಒಳಪೆಟ್ಟು ಆಯಿತು ಎಂದರೆ ಸರಿಯಲ್ಲ. ಇದನ್ನು ನೋಡಿ ಬಿಡಿಸಲು ಬಂದ ಚಾ.ಸಾ.5 ರವರಿಗೆ 3 ನೇ ಆರೋಪಿತನು ಕೈಯಿಂದ ಹೊಡೆದನು ಎಂದರೆ ಸರಿಯಲ್ಲ. ನಂತರ 3 ಮತ್ತು 4 ನೇ ಆರೋಪಿತರು ಸೇರಿ ನಮಗೆಲ್ಲರಿಗೂ ಕೈಯಿಂದ ಹೊಡೆದರು ಎಂದರೆ ಸರಿಯಲ್ಲ. ಊರಿನ ಜನ ಬರುವುದನ್ನು ನೋಡಿ, ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ನಂತರ ಚಾ.ಸಾ.1, 4, 5 ಸೇರಿ ನನಗೆ ಮುಂಡಗೋಡ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ನಾನು ಬಿದ್ದು ಪೆಟ್ಟು ಮಾಡಿಕೊಂಡಿದ್ದರಿಂದ ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದು ನುಡಿಯುತ್ತಾರೆ. ಈ ಘಟನೆಯ ಕುರಿತಂತೆ ದಿನಾಂಕ 22.05.2019 ರಂದು ಈ ಮೇಲೆ

ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ. 6 ಎಂದು ಗುರುತಿಸಲಾಯಿತು. ನಂತರ ಅದೇ ದಿನ ನಾನು ಶಿರಸಿ ನ್ಯಾಯಾಲಯದಲ್ಲಿ ಹಾಜರಾಗಿ ನಿ.ಪಿ.5 ರಂತೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಸ್ವತಃ ಸದರಿ ಹೇಳಿಕೆಯನ್ನು ನನನ ತಪ್ಪು ಕಲ್ಪನೆಯಿಂದ ನೀಡಿರುತ್ತೇನೆ ಎಂದು ನುಡಿಯುತ್ತಾರೆ.

4. ಈ ಪ್ರಕರಣದ 4 ನೇ ಆರೋಪಿತನು ಚಾ.ಸಾ.1, 4 ಮತ್ತು 5 ರವರ ಮೇಲೆ ದೂರನ್ನು ನೀಡಿದ್ದು, ಅದು ಇದೇ ನ್ಯಾಯಾಲಯದಲ್ಲಿ ಸ್ಪೆಶಲ್ ಕೇಸ್ ನಂಬರ 27/2020 ರಲ್ಲಿ ವಿಚಾರಣೆಗೆ ಬಾಕಿ ಇರುತ್ತದೆ ಎಂದರೆ ಸರಿ. ಅವರು ಈ ಪ್ರಕಣದಲ್ಲಿ ಚಾ.ಸಾ.1, 4 ಮತ್ತು 5 ರವರ ವಿರುದ್ಧ ಸಾಕ್ಷಿ ನುಡಿಯಬಹುದು ಎಂಬ ಕಾರಣದಿಂದಾಗಿ ನಾನು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್.ಎ.ಕೆ . ವಕೀಲರಿಂದಃ-**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ